Fax: 08282-256262
E-mail:kuvempuacademic@gmail.com

Phone No. 08282-256149
Website: www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ಶೈಕ್ಷಣಿಕ ವಿಭಾಗ, ವಿಶ್ವವಿದ್ಯಾಲಯ ಕಾರ್ಯಾಲಯ, ಕುವೆಂಪು ಶತಮಾನೋತ್ಸವ ಭವನ, ಜ್ಞಾನಸಹ್ಯಾದ್ರಿ,
ಶಂಕರಘಟ್ಟ. – 577 451, ಶಿವಮೊಗ್ಗ ಜಿಲ್ಲೆ.

Re-Accredited by NAAC with "A" Grade, Ranked 73rd place in NIRF-2019 & 45th Place at National Level in SCIMAGO Rankings

ಸಂಖ್ಯೆ:ಕುವಿ:ಎಸಿ–1&2:ಪಿಹೆಚ್.ಡಿ.: 6765 :2019–20

ದಿನಾಂಕ:13–02–2020

## ~:ಪರಿಷ್ಕೃತ ಸುತ್ತೋಲೆ :~

ವಿಷಯ: ಸ್ಕೋಪಸ್ ಇಂಡಕ್ಸ್ ಜರ್ನಲ್ಸ್‌ನಲ್ಲಿ ಹಾಗೂ ಇತರೆ ಜರ್ನಲ್ಸ್‌ಗಳಲ್ಲಿ ಪ್ರಕಟವಾಗಿರುವ ಸಂಶೋಧನಾ ಲೇಖನಗಳನ್ನು ಪರಿಗಣಿಸುವ ಕುರಿತು.

ಉಲ್ಲೇಖ:
1. ಈ ಕಛೇರಿ ಸುತ್ತೋಲೆ ಸಂಖ್ಯೆ: ಕುವಿ:ಶೈವಿ:ಪಿಹೆಚ್.ಡಿ:6762/2018–19, ದಿ:06–02–2019
2. ಯು.ಜಿ.ಸಿ ಸುತ್ತೋಲೆ ಸಂಖ್ಯೆ: F-1-1/2018(Journal/CARE) dt.16-09-2019.
3. ದಿನಾಂಕ:25–11–2019 ಹಾಗೂ ದಿನಾಂಕ:29–01–2020 ರಂದು ಜರುಗಿದ ಸಂಶೋಧನಾ ಸಲಹಾ ಮಂಡಳಿಸಭೆಯ ನಿರ್ಣಯ.
4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:13–02–2020.

----

ಕುವೆಂಪು ವಿಶ್ವವಿದ್ಯಾಲಯದ ಪರಿಷ್ಕೃತ ಪಿಹೆಚ್.ಡಿ. ವಿನಿಯಮ 2017 ರನ್ವಯ ನೋಂದಣಿಯಾದ ಅಭ್ಯರ್ಥಿಗಳು ಪ್ರಕರಣ 20.1 ಮತ್ತು 20.2 ರಲ್ಲಿ ತಿಳಿಸಿರುವಂತೆ ಸಂಶೋಧನಾ ಲೇಖನಗಳು ಸ್ಕೋಪಸ್ ಇಂಡಕ್ಸ್ ಜರ್ನಲ್ಸ್‌ನಲ್ಲಿ ಪ್ರಕಟಿಸುವುದನ್ನು ಉಲ್ಲೇಖ (01)ರ ಸುತ್ತೋಲೆಯಲ್ಲಿ ಕಡ್ಡಾಯಗೊಳಿಸಿರುವುದರಿಂದ ಸ್ಕೋಪಸ್ ಇಂಡಕ್ಸ್ ಜರ್ನಲ್ಸ್‌ನಲ್ಲಿ ಹಲವಾರು ವಿಷಯಗಳಿಗೆ ಸಂಬಂಧಿಸಿದಂತೆ ಲೇಖನಗಳು ಪ್ರಕಟವಾಗದೇ ಇರುವುದರಿಂದ ಹಾಗೂ ಪಿಹೆಚ್.ಡಿ. ಅಭ್ಯರ್ಥಿಗಳು ಯು.ಜಿ.ಸಿ. ಹಾಗೂ ಇನ್ನಿತರೆ ಮಾನ್ಯತೆ ಪಡೆದ ಜರ್ನಲ್ಸ್‌ನಲ್ಲಿ ತಮ್ಮ ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದರೂ ವಿಶ್ವವಿದ್ಯಾಲಯವು ಸ್ಕೋಪಸ್ ಇಂಡಕ್ಸ್ ಜರ್ನಲ್ಸ್‌ನಲ್ಲಿ ಸಂಶೋಧನಾ ಲೇಖನ ಪ್ರಕಟಣೆಯನ್ನು ಕಡ್ಡಾಯಗೊಳಿಸಿರುವುದರಿಂದ ಪಿಹೆಚ್.ಡಿ. ಅಭ್ಯರ್ಥಿಗಳಿಗೆ ಮಹಾಪ್ರಬಂಧ ಸಲ್ಲಿಸಲು ತೊಂದರೆಯಾಗುತ್ತಿರುವ ಹಿನ್ನೆಲೆಯಲ್ಲಿ, ಸದರಿ ಕ್ರಮವನ್ನು ಮರು ಪರಿಶೀಲಿಸುವಂತೆ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಂದ /ಅಧ್ಯಾಪಕರ ಸಂಘದಿಂದ ಹಾಗೂ ಪಿಹೆಚ್.ಡಿ. ಅಭ್ಯರ್ಥಿಗಳಿಂದ ಮನವಿಗಳು ಬಂದ ಹಿನ್ನೆಲೆಯಲ್ಲಿ ದಿನಾಂಕ:25–11–2019ರಂದು ಜರುಗಿದ ಸಂಶೋಧನಾ ಸಲಹಾ ಮಂಡಳಿ ಸಭೆಯು ಈ ಬಗ್ಗೆ ಚರ್ಚಿಸಿ ನಿರ್ಣಯಿಸಿದಂತೆ ಎಲ್ಲಾ ನಿಕಾಯಗಳ ಡೀನರುಗಳು UGC-CARE Referemce List of Quality Journals (UGC-CARE-List) ಹೊರತುಪಡಿಸಿ, ಇನ್ನಿತರೆ ಉತ್ತಮ ಗುಣಮಟ್ಟದ ಜರ್ನಲ್ಸ್‌ಗಳ ಹಾಗೂ ವಿಷಯ ನಿಯತಕಾಲಿಕೆಗಳ ಪಟ್ಟಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದು, ದಿನಾಂಕ:29–01–2020ರಂದು ಜರುಗಿದ ಸಂಶೋಧನಾ ಸಲಹಾ ಮಂಡಳಿ ಸಭೆಯು ಈ ಬಗ್ಗೆ ಮತ್ತೊಮ್ಮೆ ಸುಧೀರ್ಘವಾಗಿ ಪರಿಶೀಲನೆ ಮಾಡಿ ಇನ್ನು ಮುಂದೆ ಪಿಹೆಚ್.ಡಿ. ಅಭ್ಯರ್ಥಿಗಳು ಸ್ಕೋಪಸ್ ಇಂಡಕ್ಸ್ ಜರ್ನಲ್ಸ್ ಹೊರತುಪಡಿಸಿದಂತೆ UGC Care list/UGC approved list of Referred Journals /Web Of Science / SCIE ಹಾಗೂ ಜರ್ನಲ್ಸ್ ಗಳಲ್ಲಿ ಪ್ರಕಟಿಸಿರುವ ಸಂಶೋಧನಾ ಲೇಖನಗಳನ್ನು ಹಾಗೂ ಭಾಷಾ ವಿಷಯಗಳಿಗೆ ಸಂಬಂಧಿಸಿದಂತೆ ISBN ಪುಸ್ತಕಗಳಲ್ಲಿ ಮತ್ತು ISSN ಜರ್ನಲ್ಸ್‌ಗಳಲ್ಲಿ ಪ್ರಕಟಿಸಿರುವ ಸಂಶೋಧನಾ ಲೇಖನಗಳನ್ನು ಹಾಗೂ ದಿನಾಂಕ:01–07–2019ರ ನಂತರ ಮಹಾಪ್ರಬಂಧ ಸಲ್ಲಿಸಿರುವ ಪಿಹೆಚ್.ಡಿ ಅಭ್ಯರ್ಥಿಗಳು ಸ್ಕೋಪಸ್ ಇಂಡಕ್ಸ್ ಜರ್ನಲ್ಸ್‌ನಲ್ಲಿ ಹೊರತುಪಡಿಸಿ ಬೇರೆ ಜರ್ನಲ್ಸ್‌ಗಳಲ್ಲಿ ಪ್ರಕಟಿಸಿರುವ ಸಂಶೋಧನಾ ಲೇಖನಗಳನ್ನು ಸಂಬಂಧಿಸಿದ ಡಾಕ್ಟರಲ್ ಸಮಿತಿಯು ಅನುಮೋದಿಸಿದ್ದಲ್ಲಿ, ಅಂತಹ ಪಿಹೆಚ್.ಡಿ. ಅಭ್ಯರ್ಥಿಗಳ ಮಹಾಪ್ರಬಂಧವನ್ನು ಅಂಗೀಕರಿಸಬಹುದೆಂದು ಸಲಹಾ ಮಂಡಳಿಯ ನಿರ್ಣಯಿಸಿರುತ್ತದೆ. ಆದ್ದರಿಂದ ಸದರಿ ನಿರ್ಣಯವನ್ನು ತಕ್ಷಣದಿಂದ ಜಾರಿಗೊಳಿಸಲು ಉಲ್ಲೇಖ (04)ರಲ್ಲಿ ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಈ ಸುತ್ತೋಲೆ ಹೊರಡಿಸಲಾಗಿದೆ.

ಆದ್ದರಿಂದ ಎಲ್ಲಾ ಸ್ನಾತಕೋತ್ತರ ವಿಭಾಗಗಳ ಆಧ್ಯಕ್ಷರುಗಳು ಸುತ್ತೋಲೆಯಲ್ಲಿ ತಿಳಿಸಿರುವಂತೆ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ. ಈ ಮಾಹಿತಿಯನ್ನು ವಿಭಾಗದ ಎಲ್ಲಾ ಮಾರ್ಗದರ್ಶಕರ ಹಾಗೂ ಸಂಶೋಧನಾರ್ಥಿಗಳ ಗಮನಕ್ಕೆ ತರಲು ತಿಳಿಸಲಾಗಿದೆ.

(ಡಾ. ಧರಣಿ ಕುಮಾರ್ ಪಿ.)

ಉಪ ಕುಲಸಚಿವ
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನ ಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

--2

Circulers

ಗೆ

ಎಲ್ಲಾ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಮುಖ್ಯಸ್ಥರು / ಸಂಯೋಜನಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ /ಶಿವಮೊಗ್ಗ /ಕಡೂರು / ಚಿಕ್ಕಮಗಳೂರು.

ಪ್ರತಿ:

1. ಕುಲಸಚಿವರು(ಪರೀಕ್ಷಾಂಗ), ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
2. ಅಪ್ತ ಕಾರ್ಯಾಲಯ:- ಕುಲಪತಿಗಳು:ಕುಲಸಚಿವರು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
3. ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
4. ನಿರ್ದೇಶಕರು, ವಿದೇಶಿ ವಿದ್ಯಾರ್ಥಿಗಳ ಕುಂದುಕೊರತೆಗಳ ಘಟಕ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
5. ನಿರ್ದೇಶಕರು, ಯು.ಸಿ.ಸಿ.ಎಫ್ ಘಟಕ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ- ಸದರಿ ಮಾಹಿತಿಯನ್ನು ವಿಶ್ವವಿದ್ಯಾಲಯದ ಅಂತರಜಾಲದಲ್ಲಿ ಪ್ರಕಟಿಸಲು ಕೋರಿದ್ಶೆ.
6. ಕಛೇರಿ ಪ್ರತಿ.

Circulers